## ಸಣ್ಣ ಕಾರ್ಖಾನೆಗಳು

ತರಗತಿಯಲ್ಲಿ ವಾಯುಮಾಲಿನ್ಯದ ದುಷ್ಪರಿಣಾಮಗಳ ಕುರಿತು ಪಾಠ ಮಾಡುತ್ತಿದ್ದೆ. ಕಾರ್ಖಾನೆ, ವಾಹನಗಳ ದಟ್ಟ ಹೊಗೆ ವಾಯುಮಾಲಿನ್ಯಕ್ಕೆ ಕಾರಣ. ಹಾಗೆಯೇ ಈ ಧೂಮಪಾನಿಗಳೂ ಸಹ 'ಸಣ್ಣ ಕಾರ್ಖಾನೆಗಳಂತೆ' ವಾಯುಮಾಲಿನ್ಯಕ್ಕೆ ಕಾರಣರಾಗುತ್ತಾರೆಂದು ಹೇಳಿದೆ. ಸಂಜೆ ಮನೆಗೆ ತೆರಳುವಾಗ ನನ್ನ ಮುಂದೆ ಕೆಲ ಅಡಿಗಳ ದೂರದಲ್ಲಿ ಮಕ್ಕಳು ಗುಂಪಾಗಿ ಮುನ್ನಡೆಯುತ್ತಿದ್ದರು. ರಸ್ತೆ ಬದಿಯ ಸಾರ್ವಜನಿಕ ಕಟ್ಟೆಯ ಮೇಲೆ ಹಿರಿಯರೊಬ್ಬರು ಬೀಡಿ ಸೇದುತ್ತಾ ಕುಳಿತಿದ್ದರು. ಆ ಹಿರಿಯರನ್ನು ನೋಡಿದ ಮಕ್ಕಳು, ಪಿಸುಮಾತಿನಲ್ಲಿ, 'ಸಣ್ಣ ಕಾರ್ಖಾನೆ, ಸಣ್ಣ ಕಾರ್ಖಾನೆ' ಎನ್ನುತ್ತ ಗೊಳ್ಳೆಂದು ನಗುತ್ತಾ ಮುಂದೆ ಹೋದದ್ದನ್ನು ನೋಡಿ ಮುಜುಗರದ ನಡುವೆಯೂ ನಗೆಯುಕ್ಕಿತು.

**ಮಹೇಶ್ವರ ಹುರುಕಡ್ಲಿ**





## ಡಿಸೈನ್ ಬಟ್ಟೆ ತಗೊ

ನನ್ನ ನೆಂಟರೊಬ್ಬರ ಮನೆಯ ಹುಡುಗಿ ಏರ್‌ಫೋರ್ಸ್‌ನಲ್ಲಿ ಕೆಲಸಕ್ಕೆ ಸೇರಿದ್ದಳು. ತನ್ನ ಕಚೇರಿಗೆ ಹತ್ತಿರವೇ ಬಾಡಿಗೆ ಮನೆ ಹಿಡಿದಳು. ಆ ಮನೆಯೊಡತಿಗೆ ಹುಡುಗಿ ಒಬ್ಬಳೇ ಹೀಗೆ ಮನೆಯವರಿಂದ ದೂರವಿದ್ದು, ಕೆಲಸಕ್ಕೆ ಹೋಗುವುದನ್ನು ಕಂಡು ಅನುಕಂಪ ಮತ್ತು ಕುತೂಹಲ. ಪ್ರತಿ ದಿನ ಬೆಳಗ್ಗೆ ಗೇಟಿನ ಬಳಿ ನಿಂತು ಆ ಹುಡುಗಿಗೆ ಕೈ ಬೀಸಿ ಬೀಳ್ಕೊಡುತ್ತಿದ್ದಳು. ಒಂದು ತಿಂಗಳು ಕಳೆಯಿತು. ಮೊದಲ ತಿಂಗಳ ಸಂಬಳ ಬಂದ ಬಳಿಕ ಆ ಹುಡುಗಿ ಬಾಡಿಗೆ ಹಣ ಕೊಡಲು ಹೋದಾಗ ಆಕೆ, 'ಬೇಡಮ್ಮ, ಇದನ್ನು ನೀನೇ ಇಟ್ಟುಕೊ. ಪ್ರತಿ ದಿನ ಒಂದೇ ಬಟ್ಟೆ ಹಾಕ್ಕೊಂಡು ಹೋಗೋದು ನೋಡಿ ಪಾಪ ಅನಿಸುತ್ತೆ... ಈ ರೊಕ್ಕದಲ್ಲಿ ಹೊಸ ಡಿಸೈನ್ ಬಟ್ಟೆ ತಗೊ, ಆಯ್ತಾ?' ಎನ್ನುತ್ತ ಬಾಯಿತುಂಬಾ ನಕ್ಕಳಂತೆ.

**ಹಾಡ್ಯ ಬ. ಜಯಾನಂದ**